ಸಂಪ್ರದಾಯವು ಹಳೇ ಬೇರು ಮತ್ತು ಹೊಸ ಚಿಗುರು ಜೊತೆಗೂಡಿದಂತೆ ತೈವಾನಿನ ವಿಶಿಷ್ಟ ಸಂಸ್ಕೃತಿಯಾಗಿ ವಿಕಸನಗೊಂಡಿದೆ.

**◆ ಈಗ ತೈವಾನ್ ಜನರ ಜೀವನ ಮಟ್ಟ ಹಾಗೂ ಆರ್ಥಿಕ ಮುಂಚಲನೆ ಹೇಗಿದೆ?**

ಗುಡ್ಡಗಾಡು ಪ್ರದೇಶಗಳಲ್ಲಿ ಹೆಚ್ಚಾಗಿ ವಾಸಿಸುತ್ತಾ ಪಶುಪಾಲನೆ ಮಾಡುತ್ತಾ, ಚಹಾದ ಎಲೆಗಳನ್ನು ಬೆಳೆಯುವುದರ ಮೂಲಕ ಜೀವನ ಸಾಗಿಸುತ್ತಿದ್ದ ಹಕ್ಕಾ ಜನರು, ಆಗಾಗ್ಗೆ ಮಲೆನಾಡಿನ ಹಾಡುಗಳನ್ನು ಅಥವಾ ಚಹಾ ಕೊಯ್ಲಿನ ಹಾಡುಗಳನ್ನು ಹಾಡುತ್ತಿದ್ದರು. ಜಪಾನಿನ ವಸಾಹತು ಆಡಳಿತಕ್ಕೆ ಒಳಪಟ್ಟ ಮೇಲೆ ಬೃಹತ್ ನೀರಾವರಿ ಯೋಜನೆಗಳನ್ನು ಹಮ್ಮಿಕೊಳ್ಳಲಾಯಿತು. ದೊಡ್ಡದೊಡ್ಡ ಆಣೆಕಟ್ಟುಗಳು, ಕೃತಕ ಸರೋವರಗಳು ಹಾಗೂ ರಾಜ ಕಾಲುವೆಗಳನ್ನು ನಿರ್ಮಿಸಲಾಯಿತು. ಕೇವಲ ಬೇಟೆ, ಗೆಡ್ಡೆಗೆಣಸು ಮತ್ತಿತರ ಕಾಡಿನ ಉತ್ಪನ್ನಗಳ ಮೇಲೆ ಅವಲಂಬಿತರಾಗಿದ್ದ ಜನ ಭತ್ತ ಹಾಗೂ ಕಬ್ಬು ಬೆಳೆಯಲಾರಂಭಿಸಿದರು.

ಎರಡನೇ ಮಹಾಯುದ್ಧದ ನಂತರದ ನಾಲ್ಕು ದಶಕಗಳಲ್ಲಿ 'ಆರ್ಥಿಕ ಪವಾಡವೇ' ಸಂಭವಿಸಿತು ಎನ್ನಬಹುದು. ನಗರಗಳಲ್ಲಿ ಕೈಗಾರಿಕ ಕ್ರಾಂತಿ ಆರಂಭವಾಗಿ, ತಂತ್ರಜ್ಞಾನ ಯುಗ ಕಾಲಿಟ್ಟಿತು. ನೋಡನೋಡುತ್ತಿದ್ದಂತೆ ಜನ ನಗರಗಳೆಡೆಗೆ ವಲಸೆ ಹೋದರು. ಬಾಡಿಗೆ ಮನೆಯ ಸಮಸ್ಯೆ ಉದ್ಭವಿಸಿತು. ಅಪಾರ್ಟ್‌ಮೆಂಟ್ ಸಂಸ್ಕೃತಿ ತಲೆ ಎತ್ತಿತು. ಕೃಷಿ ಎಷ್ಟೇ ಆಧುನೀಕರಣಗೊಂಡರೂ, ಹೊಸ ತಲೆಮಾರು ನಗರ ಜೀವನಕ್ಕೆ ಮಾರು ಹೋಗಿದೆ. ಸರ್ಕಾರ ರೈತ ಪರವಾದ ಎಷ್ಟೇ ಒಳ್ಳೆಯ ಪಾಲಿಸಿಗಳನ್ನು ಮಾಡಿದರೂ, ಈಗಂತೂ ಹಳ್ಳಿಯಲ್ಲಿ ಇರುವುದು ಯಾರಿಗೂ ಇಷ್ಟವಿಲ್ಲ. ರೈತಾಪಿತನ ಎನ್ನುವುದು ಈಗ ವಯೋವೃದ್ಧರ ಪುರಾತನ ಕಾಯಕವಾಗಿ ಉಳಿದಿದೆ.

**◆ ಪದೇ ಪದೇ ನಿಮಗೆ ಬೀಳುವ ಕನಸು ಯಾವುದಾದುರೂ ಇದ್ದರೆ ಹಂಚಿಕೊಳ್ಳಿ?**

ನನ್ನ ಕನಸುಗಳು ವೈವಿಧ್ಯಮಯ, ಆಳ ಮತ್ತು ಅನನ್ಯವಾದವು ಅಂತ ನಾನು ಯಾವಾಗಲೂ ನಂಬಿದ್ದೇನೆ. ಬಹುತೇಕ ಸಲ ನನಗೆ ಬಿದ್ದ ಕನಸುಗಳು ನನ್ನ ನೆನಪಿನಲ್ಲಿರುತ್ತವೆ. ಆದ್ದರಿಂದ ಎಚ್ಚರವಾದ ನಂತರ ಅವುಗಳನ್ನು ಟಿಪ್ಪಣಿಗಳೊಂದಿಗೆ ಬರೆಯುವ ರೂಢಿ ಬೆಳೆಸಿಕೊಂಡಿದ್ದೇನೆ. ಅನೇಕ ಸಲ ಸಿನಿಮಾ ಮಾಡುವಷ್ಟು ವರ್ಣಮಯ ಕನಸುಗಳು ಬಿದ್ದು ಆಗಾಗ್ಗೆ ಆಶ್ಚರ್ಯ ಹುಟ್ಟಿಸುತ್ತವೆ. ನಿಜಕ್ಕೂ ಈ ಕನಸಿನ ಲೋಕ ಬಲು ವಿಚಿತ್ರ. ಇದು ನಾವು ಕಟ್ಟಿಕೊಂಡ ಭಾಷೆ, ಸಂಸ್ಕೃತಿ ಹಾಗೂ ಒಟ್ಟಾರೆ ಸಾಮಾಜಿಕ ತರ್ಕ ಎಲ್ಲಾ ಉಲ್ಟಾಪಲ್ಟಾ ಮಾಡುವ ತಾಣವಿದು! ಮನುಷ್ಯ ತನ್ನ ನಾಗರಿಕ ಭಾಷೆಯ ಮಿತಿ ಮನಗಾಣಲು ಆಗಾಗ ಕನಸು ಕಾಣುತ್ತಾನೆ ಅನ್ಸುತ್ತೆ!

**◆ ನಿಮಗೆ ದಿಗಿಲು ಹುಟ್ಟಿಸುವ ಸಂಗತಿ ಯಾವುದು? ಅಂಥದ್ದೇನಾದರೂ ಇದ್ದರೆ ಹಂಚಿಕೊಳ್ಳಿ**

ಗಾಢ ನಿದ್ದೆಯಿಂದ ಬಡಿದೆಬ್ಬಿಸಿದಂತೆ ನನಗೆ ಎಚ್ಚರವಾಗುತ್ತದೆ ಮತ್ತು ತೀವ್ರವಾಗಿ ಸಾವಿನ ಭಯ ಕಾಡುತ್ತದೆ. ಬಾಲ್ಯದಿಂದಲೂ ಈ ಭಯ ನನ್ನನ್ನ ಕಾಡುತ್ತಿದೆ. ಈ ಭಯದೊಂದಿಗೇ ಎಲ್ಲಾ ಜೀವಜಂತುಗಳು ಹುಟ್ಟಿವೆ ಅಂತ ನನ್ನ ನಂಬಿಕೆ. ಹಾಗಾಗಿ ಪ್ರಪಂಚದಾದ್ಯಂತ ಸಾವನ್ನು ಅನ್ವೇಷಿಸುವ ಮತ್ತು ಅಭಿವ್ಯಕ್ತಿಸುವ ಹತ್ತಾರು ಸುಂದರ ಕವಿತೆಗಳು ಹುಟ್ಟಿಕೊಂಡಿವೆ. ಮಾನುಷ ಲೋಕದಲ್ಲಿ ಸಾವು ಮತ್ತು ಪ್ರೇಮ ವೈಬ್ರೆಂಟ್ ಆದ ವಸ್ತು ವಿಷಯಗಳು, ಮನ ಪೂರ್ವಕವಾಗಿ ಯಾರು ಮುಟ್ಟಿದರೂ ಮಿಡಿಯುತ್ತವೆ!

**◆ ನಿಮಗೆ ಒಪ್ಪಿಗೆ ಇದ್ದರೆ ನಿಮ್ಮ ಜೀವನದ ಒಂದು ಸಿಹಿ ಮತ್ತು ಕಹಿ ನೆನಪು ಹಂಚಿಕೊಳ್ಳಬಹುದು..**

ಯಾರಾದರೂ ನಮ್ಮಿಂದ ದೂರವಾಗ್ತಾ ಇದ್ದಾರೆ ಅಂತ ಅನಿಸಿದಾಗ, ನಮಗೆ ಸ್ವಲ್ಪನಾದರೂ ನೋವಾಗಬೇಕು. ಇಲ್ಲದಿದ್ದರೆ ಆ ಸಂಬಂಧಕ್ಕೆ ಯಾವ ಮಹತ್ವವೂ ಉಳಿದಿಲ್ಲ ಅಂತ ಅರ್ಥ!. ನಾನು ಪ್ರೀತಿಸುವ ವ್ಯಕ್ತಿಗೆ ನನ್ನ ಮೇಲೆ ಕಾಳಜಿ ಇದೆ ಎಂದು ಗೊತ್ತಾದ ಆ ಕ್ಷಣ ನನ್ನ ಬದುಕಿನ ಅತಿ ಮಧುರ ನೆನಪು. ನಂಬಿಕೆ ದ್ರೋಹದ ಅರಿವು ನನಗಾದ ಕ್ಷಣ ಅತ್ಯಂತ ಕಹಿ ನೆನಪು. (ವಿವರಗಳನ್ನ ನಾನಿಲ್ಲಿ ಹೇಳಲಾರೆ.ನಿಮ್ಮ ಕಲ್ಪನೆಗೆ ಬಿಡುತ್ತೇನೆ)

●